ಸುದ್ದಿ ಹಬ್ಬಿದೆಲ್ಲರ ಮೇಲೆ ಕಂಡಾಪಟ್ಟೆ ಸಿಟ್ಟು ಬರ್ತಾಯಿತ್ತು. ನೀ ನಂಬ್ತಿಯೋ ಇಲ್ವೋ, ಎರಡ್ ವರ್ಷ ತಂದೆರಡು ಮಕ್ಕೊಂದಿಗೆ ನನ್ನೂ ಮಗುವಿನಂತೆ ನೋಡ್ಕಂಡಿದ್ದು ಕಡೀಗ್ ನನ್ನ ಗಂಡನೇ!'

ಪಾರು ಸಟ್ಟನೆ ನಕ್ಕಳು. ಪಳಕ್ಕನೆ ಕೆನ್ನೆಯಲ್ಲಿ ಮಿಂಚಿದ ಅದೇ ಗುಳಿ! ಒಂದು ಕಾಲದಲ್ಲಿ ಮರುಳು ಮಾಡಿದ ಹಾಲ್ಗೆನ್ನೆಯ ಚಂದದ ಗುಳಿಯ ಸುಳಿ. ಕರಗಲು ಇನ್ನೇನೂ ಉಳಿದಿಲ್ಲವೆನ್ನುವಂತೆ ಕರಗಿ ಅದನ್ನೇ ಮಧ್ಯಾಹ್ನದ ನಂತರದ ಪಾಠದ ಸಮಯದಲ್ಲಿ ತದೇಕನಾಗಿ ನಿಟ್ಟಿಸುತ್ತಾ ಕ್ಲಾಸಿನಲ್ಲಿ ಕುಳಿತಿರುತ್ತಿದ್ದ ಗಳಿಗೆಗಳು! ಎಲ್ಲಿಂದಲೋ ಬೀಸಿ ಬಂದ ತಂಪು ಗಾಳಿ, ಮತ್ತೆಲ್ಲೋ ಮತ್ತು ಬರಿಸುವಂತೆ ಅಡರಿದ ಕೆಂಡಸಂಪಿಗೆ ಘಮಲು!

ಹಳೇ ನೆನಪುಗಳನ್ನು ಕೆದಕಲಿಕ್ಕಾಗಿಯೇ ಇವಳು ಇಂದು ಅಚಾನಕ್ಕಾಗಿ ಸಿಕ್ಕಳೇ? ಸುಜಿಯನ್ನು ಅವಳ ಕ್ಯಾಬ್ ಬರುವವರೆಗೆ ಬಿಟ್ಟು ಆಫೀಸಿಗೆ ಯಾವತ್ತೂ ಕಾರಿನಲ್ಲಿ ಓಡಿಯಾಡುವವನು, ಅದನ್ನು ಸರ್ವೀಸಿಗೆ ಬಿಟ್ಟು ಅಷ್ಟಾಗಿ ಮೆಟ್ರೊ ಹತ್ತದವನು ಇವತ್ತು ಹತ್ತಿದ್ದೇ ತಪ್ಪಾಯಿತೇ? ಇನ್ನೊಂದು ನರಪಿಳ್ಳೆಗೂ ಜಾಗವಿಲ್ಲದಂತೆ ತುಂಬಿಕೊಂಡಿದ್ದ ಮೆಟ್ರೊದೊಳಗೆ ಅದು ಹೇಗೆ ಕರಾರುವಾಕ್ಕಾಗಿ ಅವಳ ಮುಂದೇ ಹೋಗಿ ನಿಂತೆ?

'ಈಗೊಂದು ಮೂವತ್ತು ವರ್ಷಗಳ ಹಿಂದಿನ ನೈರೋಬಿ ನೀ ಕಂಡ ಅಮೆರಿಕ, ಯುರೋಪ್ ದೇಶಗಳ ಹಂಗಿಲ್ಲಿಲ್ಲ ಮಾರಾಯ. ನಮ್ಮವರೂಂತಾ ಯಾರೂ ಸಿಗ್ತಾಯಿರ್‍ಲಿಲ್ಲ. ನಿಧಾನಕ್ಕೆ ಬೇರೆ ಪರಿಸರ, ಗಂಡ, ನನ್ನದಲ್ಲದ ಮಕ್ಳು, ಹೊಸ ಜವಾಬ್ದಾರಿಗಳಿಗೆ ಹೊಂದಿಕೊಳ್ತಾ ಬಂದೆ. ಈಗ ಹಿಂತಿರುಗಿ ನೋಡಿದ್ರೆ ಬಹುಶಃ ಆಗಿದ್ದೆಲ್ಲಾ ಒಳ್ಳೆದಕ್ಕೇ ಆಯಿತೇನೋಂತಾ ಅನ್ಸುತ್ತೆ ಕಣೋ. ಕ್ರಮೇಣ ಗಂಡ ಅರ್ಥಾಗ್ತಾ ಬಂದ. ತುಂಬಾ ಒಳ್ಳೆಯೋರ್. ಕುಡ್ದ ನೀರ್ ಅಲುಗದಂಗೆ ನೋಡ್ಕೊಂಡ್ರು ಅಂತಾರಲಾ ಹಂಗೇ ಕಣ್ಣಲ್ಲಿ ಕಣ್ಣಿಟ್ಟು ನೋಡ್ಕಂಡ್ರು. ಆ ಎರಡು ಮಕ್ಳೂ ನನ್ನ ಭಾಳ ಹಚ್ಕಂಡವು. ಇವ್ರು ರಿಟೈರ್ಡ್ ಆದ ಮೇಲೆ ಬೆಂಗ್ಳೂರಿಗೆ ಬಂದು ಈ ಮನೆ ತಕ್ಕೊಂಡ್ವಿ. ಆದ್ರೆ ಇವ್ರು ಹೀಗೆ ಸಡನ್ನಾಗಿ ಹೋಗ್ಬಿಡ್ತಾರೇಂತಾ ಅಂದ್ಕೊಂಡಿರ್‍ಲಿಲ್ಲವೋ.'

ಅವಳು ಸಟ್ಟನೆ ಮಾತು ನಿಲ್ಲಿಸಿ ಮೌನವಾದಳು. ಅವಳ ಬದುಕಿನ ಕತೆಯನ್ನು ಯಾರು ಕೇಳಿದ್ದರೋ ಗೊತ್ತಿಲ್ಲ. ನಾನಂತೂ ಕೇಳಿರಲಿಲ್ಲ. ನನಗಾಗಿ ಕಾಯುತ್ತಿದ್ದಳೇ? ಎಂದಿನಿಂದಲೂ ಬಾಯಿಪಾಠ ಮಾಡಿದ್ದನ್ನು ಒಪ್ಪಿಸಿ ನಿರಾಳವಾಗಿ ಕೂತಳೇ? ಒಂದಲ್ಲಾ ಒಂದು ದಿನ ನಾನು ಸಿಕ್ಕೇ ಸಿಗುತ್ತೇನೆ, ಹಾಗೆ ಸಿಕ್ಕಾಗ ಇವೆಲ್ಲವನ್ನೂ ಹೇಳಿಬಿಡಬೇಕೆಂದು ಯಾವತ್ತಿನಿಂದಲೂ ಕಾದು ಕೂತವಳಂತೆ ಒಂದೇ ಸಮನೆ ಮಾತನಾಡಿ, ಕಡೆಗೂ ಹೇಳಿದ ನಿರ್ಲಿಪ್ತ ಭಾವದ ಛಾಯೆ ಹೊತ್ತು ಹಗುರವಾದ ಸ್ಥಿತಿಯೇ ಇದು?

ಯಾಕೋ ಹೇಳುವುದಕ್ಕೆ ಕೇಳುವುದಕ್ಕೆ ಏನೂ ಇಲ್ಲವೆನ್ನಿಸಿ ಸುಮ್ಮನೆ ಕೂತೆ. ನಾನಿನ್ನೂ ಅವಳನ್ನು ಅಚಾನಕ್ಕಾಗಿ ಸಂಧಿಸಿದ ಆಘಾತದಲ್ಲೇ ಇರುವೆನೇ? ಹೊಳೆಯಲಿಲ್ಲ. ಸುತ್ತಲಿನ ಜಗತ್ತಿನ ಅಸಂಖ್ಯ ಸದ್ದುಗಳ ನಡುವಿನಲ್ಲೇ ನೆಲೆಸಿಬಿಟ್ಟ ಒಂದು ಅಸಾಧ್ಯ ಮೌನ ಮೆಲ್ಲಗೆ ನಮ್ಮೊಳಗೆ ಇಳಿಯುತ್ತಿತ್ತು! ನಗರದ ಮೌನ ಅದೆಷ್ಟು ಅಸಹನೀಯವೆಂದು ಅರಿವಾಗಿದ್ದು ಆಗಲೇ.

'ಕಡೀಗೂ ಬದುಕೆಂದ್ರೆ ಇಷ್ಟೇ ಅಲ್ವಾ ಕೇಶವಾ? ಕಳೆದುಕೊಂಡಿದ್ದಕ್ಕೆ ಹಪಾಹಪಿಸುತ್ತಲೇ ಮತ್ತೊಬ್ಬರೊಡನೆ ಆತ್ಮವಂಚನೆಯಿಲ್ಲದೇ ಸುಖವಾಗಿ ಬದುಕಿಬಿಡುವುದು.'

ಹುಣಿಸೇಹಣ್ಣು ಕಿವಿಚಿದಂತೆ ಮತ್ತೆ ಯಾರೋ ಹೃದಯದೊಳಗೆ ಕೈ ಹಾಕಿ ಹಿಂಡಿದಂತಾಯಿತು. ಅನೇಕ ವರುಷ ಅನುಭವಿಸಿದ ಅದೇ ಚಿರಪರಿಚಿತ ನೋವು. ಸುಜಿಯನ್ನು ಪ್ರೀತಿಸಿ ಮದುವೆಯಾದ ಮೇಲೂ ಅವಳನ್ನು ಕೂಡುವ ಪ್ರತಿ ಉತ್ಕಟ ಕ್ಷಣಗಳಲ್ಲೂ ಒಳಗೇ ಕುಸಿದು ನರಳಿಸಿ ಪೀಡಿಸಿದ ಮತ್ತದೇ ನೋವು.

ಖಚಿತ ಧ್ವನಿಯಲ್ಲಿ ಮೆಲ್ಲಗೆ ಸೇರಿಸಿ ಅವಳು ನನ್ನ ಮುಖ ನೋಡುತ್ತಾ ಸುಮ್ಮನೆ ಕೂತಳು.